## ನವಿಲುಗನ್ನಡಿ

- ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ 94ರ ವಯಸ್ಸಿನಲ್ಲೂ ಸಾಹಿತ್ಯ ಕೃಷಿ ಮಾಡಿ ಸೈ ಎನಿಸಿಕೊಂಡಿದ್ದ ಪ್ರೊ.ಎಲ್.ಎಸ್. ಶೇಷಗಿರಿ ರಾವ್ ಅವರ ಜನ್ಮಶತಾಬ್ದಿ ಸ್ಮರಣೆ ಹಿನ್ನೆಲೆಯಲ್ಲಿ ಅವರ ನೆನಪಿನ ಲೇಖನ ಸಕಾಲಿಕವಾಗಿತ್ತು. ಎಸ್.ಆರ್. ವಿಜಯಶಂಕರ ಅವರು ಎಲ್‌ಎಸ್‌ಎಸ್ ಅವರ ವ್ಯಕ್ತಿತ್ವವನ್ನು ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ.

**ಜಿ.ಎಚ್. ಸಂಕಪ್ಪ, ಮೈಸೂರು**

- ಡಿಸೆಂಬರ್ ಸಂಚಿಕೆಯಲ್ಲಿ ಕೇಶವರೆಡ್ಡಿ ಹಂದ್ರಾಳ ಅವರ 'ಪ್ರಿಸನ್' ಕಥೆ ಮನಕಲಕುವಂತಿತ್ತು. ಬಹುಶಃ ಈ ರೀತಿಯ ಘಟನೆ ನಡೆದಿರುವ ಸಂಭವವೂ ಇರುತ್ತದೆ. ನಕ್ಸಲರ ಹುಟ್ಟು ಶುರುವಿನಲ್ಲಿ ಸಾಮಾಜಿಕ ಕಳಕಳಿಯಿಂದಲೇ ಕೂಡಿತ್ತು. ಈ ಎಳೆಯನ್ನು ಇಟ್ಟುಕೊಂಡು ಅಲ್ಲಿ ನಡೆಯುವ ಅನ್ಯಾಯವನ್ನು ಓದಿ ಕಣ್ಣು ಒದ್ದೆಯಾಯಿತು. ಜೈಲರ್ ಜೀವನ ಕುರಿತು ರೋಚಕವಾದ ಅನುಭವ ಕಥೆಯಲ್ಲಿ ಅತ್ಯುತ್ತಮವಾಗಿ ಮೂಡಿಬಂದಿದೆ

**ಶ್ಯಾಮಲ ಎಚ್.ಎನ್., ಬೆಂಗಳೂರು**

- ಪಠಣ ಕುತೂಹಲ ಅಂಕಣದಲ್ಲಿ 'ಕಾಲಜ್ಞಾನಿ ಅಂಬೇಡ್ಕರ್' ಅವರ ಕುರಿತು ಎಂ.ಎಸ್. ಶ್ರೀರಾಮ್ ಅವರ ಬರಹ ಅಂಬೇಡ್ಕರ್ ಕುರಿತು ಇದ್ದ ಜ್ಞಾನವನ್ನು ಮತ್ತಷ್ಟು ವಿಸ್ತರಿಸಿತು. ಅಂಬೇಡ್ಕರ್ ಅವರನ್ನು ದಲಿತ ಹೋರಾಟಗಾರ ಎಂದು ಮಾತ್ರ ತಿಳಿದಿದ್ದೆ. ಆದರೆ, ಅವರೊಬ್ಬ ಅರ್ಥಶಾಸ್ತ್ರಜ್ಞ, ಕಾನೂನು ಪಂಡಿತ, ಅಷ್ಟೇ ಅಲ್ಲ ಸಂಸ್ಕೃತ ಭಾಷೆಯ ಮೇಲೆ ಹಿಡಿತ ಸಾಧಿಸಿದ ಜ್ಞಾನಿ ಎಂಬುದೂ ತಿಳಿಯಿತು. ಲೇಖನದಲ್ಲಿ ಅಂಬೇಡ್ಕರ್ ಅವರ ಕುರಿತು ನೈಜ ಚಿತ್ರಣವಿದೆ. ಜ್ಞಾನ ಪಿಪಾಸುವಾಗಿದ್ದ ಅಂಬೇಡ್ಕರ್ ಅವರು ಎಲ್ಲ ಸಮುದಾಯದವರನ್ನು ಎಲ್ಲ ರೀತಿಯಿಂದಲೂ ಒಳಗೊಳ್ಳುವ ಸಂವೇದನಾಶೀಲರಾಗಿದ್ದರು ಎಂಬುದು ಸ್ಪಷ್ಟವಾಯಿತು.

**ಶಂಕರ ನಾರಾಯಣ ಭಟ್, ಮಾಡಗೇರಿ, ಹೊನ್ನಾವರ**

- ಸಮುದ್ಯತಾ ವೆಂಕಟರಾಮು ಅವರ ಕವಿತೆ 'ಕೂಡಿ ಕಳೆಯುವ ಲೆಕ್ಕ' ಬದುಕಿನ ಹುಟ್ಟು–ಸಾವುಗಳ ವಿಶ್ಲೇಷಣೆ ಕುರಿತು ಧ್ವನಿಸುತ್ತದೆ. ಕೂಡಿ ಕಳೆಯುವ ಲೆಕ್ಕ ಬದುಕಿನಾಟದ ಗುಟ್ಟು ಔಚಿತ್ಯ ಪೂರ್ಣವಾಗಿದೆ. ಕಿರಿಯದರಲ್ಲಿ ಹಿರಿಯರ್ಥ ನೀಡಿದೆ.




**ಎಸ್.ಆರ್. ನರಸಿಂಹ ಪ್ರಸಾದ್, ಕುಣಿಗಲ್**

- 'ಶತಮಾನದ ನಮನ'ದಲ್ಲಿ ಎಸ್. ಆರ್.ವಿಜಯ ಶಂಕರ ಅವರು ಪ್ರೊ.ಎಲ್. ಎಸ್. ಶೇಷಗಿರಿರಾವ್ ಅವರ ಬಗ್ಗೆ ಬರೆದ ಲೇಖನ ಚೆನ್ನಾಗಿದೆ. ಶೇಷಗಿರಿರಾವ್ ಅವರ ಬದುಕು, ಬರಹಗಳನ್ನು ಸವಿವರವಾಗಿ ವಿಮರ್ಶಿಸಿದ್ದಾರೆ. ಜಿ.ಎಸ್. ಶಿವರುದ್ರಪ್ಪನವರು ಬರೆದ ಕವಿತೆ ಶೇಷಗಿರಿರಾವ್ ಅವರ ವ್ಯಕ್ತಿತ್ವ, ಸಾಧನೆಯ ಚಿತ್ರಣವನ್ನು ನಮ್ಮ ಮುಂದಿಡುತ್ತದೆ.

**ಸುಶೀಲಾ ದೇವಿ ಆರ್. ರಾವ್, ದಾವಣಗೆರೆ**

- ಡಿಸೆಂಬರ್ ತಿಂಗಳ ಮಯೂರ ಆಕರ್ಷಕವಾಗಿ ಮೂಡಿಬಂದಿದೆ. ಮಯೂರ ಓದುವ ಖುಷಿಯೇ ಬೇರೆ. ಸಾಹಿತ್ಯದ ಹಸಿವಿರುವವರಿಗೆ ಮಯೂರ ಹಬ್ಬದ ಊಟ. ಮಯೂರ ಎಂದರೆ ಸಮೃದ್ಧ ಸಾಹಿತ್ಯ ಸಂಚಿಕೆ.

**ನಾಗರಾಜು ಗರಣಿ ಬಸವರಾಜು, ಮಸ್ಕತ್, ಓಮನ್**

**ಮಲ್ಲಿಕಾರ್ಜುನ ಶೆಲ್ಲಿಕೇರಿ, ಬಾಗಲಕೋಟೆ**